# ಕನ್ನಡ ಸಾಹಿತ್ಯದಲ್ಲಿ ಅಂಗವಿಕಲತೆ ಉಳ್ಳ ಸಮುದಾಯದ ಅನುಭೂತಿಯ ಶೋಧ

**ಗಿರೀಶ ಎಸ್. ಗೌಡರ್***

**DOI: https://doi.org/10.5281/zenodo.21438507**

**ABSTRACT**

ಕನ್ನಡ ಸಾಹಿತ್ಯ ಚರಿತ್ರೆಯುದ್ದಕ್ಕೂ ಶೋಷಿತ ಮತ್ತು ದಮನಿತ ಸಮುದಾಯಗಳ ಧ್ವನಿಯಾಗಿ ಅನೇಕ ಚಳುವಳಿಗಳು ರೂಪುಗೊಂಡಿದ್ದರೂ, ಅಂಗವಿಕಲ ಸಮುದಾಯದ ಅನುಭೂತಿಗಳು ಮತ್ತು ಅಸ್ತಿತ್ವವನ್ನು ಸಮರ್ಪಕವಾಗಿ ದಾಖಲಿಸುವಲ್ಲಿ ಸಾಹಿತ್ಯ ವಲಯ ತೋರಿರುವ ಮೌನವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಪ್ರಾಚೀನ ವಚನ ಸಾಹಿತ್ಯದಿಂದ ಹಿಡಿದು ಆಧುನಿಕ ಕಾಲದ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಸಾಹಿತ್ಯದವರೆಗಿನ ಕೃತಿಗಳಲ್ಲಿ ವಿಕಲಚೇತನರನ್ನು ಪ್ರತಿನಿಧಿಸಿರುವ ಬಗೆಯನ್ನು ವಿಮರ್ಶಾತ್ಮಕವಾಗಿ ಪರಿಶೋಧಿಸಲಾಗಿದೆ. ಪ್ರಮುಖ ಲೇಖಕರ ಕೃತಿಗಳಲ್ಲಿ ಮೂಡಿಬಂದಿರುವ ಪಾತ್ರಗಳ ಉದಾಹರಣೆಗಳೊಂದಿಗೆ, ಸಮಾಜವು ಈ ಸಮುದಾಯವನ್ನು ನೋಡುವ ಪೂರ್ವಾಗ್ರಹ ಪೀಡಿತ ದೃಷ್ಟಿಕೋನಗಳನ್ನು ಚರ್ಚಿಸಲಾಗಿದೆ. ಅಂತಿಮವಾಗಿ, ಇತ್ತೀಚಿನ ದಿನಗಳಲ್ಲಿ ಬ್ರೈಲ್ ಲಿಪಿಯಲ್ಲಿನ ಸಾಹಿತ್ಯ ಪ್ರಕಟಣೆ ಮತ್ತು ಸಾಹಿತ್ಯ ಸಮ್ಮೇಳನಗಳಲ್ಲಿನ ಪ್ರಾತಿನಿಧ್ಯದ ಮೂಲಕ ಈ ಸಮುದಾಯವು ತಮ್ಮದೇ ಆದ ಸೃಜನಾತ್ಮಕ ನೆಲೆ ಹಾಗೂ ಭರವಸೆಯನ್ನು ಕಂಡುಕೊಳ್ಳುತ್ತಿರುವ ಆಶಾದಾಯಕ ಬೆಳವಣಿಗೆಗಳನ್ನು ಎತ್ತಿ ತೋರಿಸಲಾಗಿದೆ.

**KEYWORDS:** ಕನ್ನಡ ಸಾಹಿತ್ಯ, ಅಂಗವಿಕಲ ಸಮುದಾಯ, ಸಾಹಿತ್ಯಿಕ ಅನುಭೂತಿ, ಪೂರ್ವಾಗ್ರಹ ಮತ್ತು ಅಸ್ತಿತ್ವ, ಪ್ರಾತಿನಿಧ್ಯ.

* **ಡಾ. ಗಿರೀಶ್ ಎಸ್. ಗೌಡರ್,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ) ಚಿತ್ರದುರ್ಗ.

ಕನ್ನಡ ಸಾಹಿತ್ಯ ಶ್ರೀಮಂತ ಹಾಗೂ ಸಮೃದ್ಧವಾದುದು. ಪ್ರಗತಿಪರವಾದ, ದಮನಿತ, ಶೋಷಿತ, ಬಂಡಾಯಾತ್ಮಕ ಧ್ವನಿಗಳನ್ನು ಮತ್ತು ಪ್ರತಿಭಟನಾತ್ಮಕ ಅಭಿವ್ಯಕ್ತಿಗಳನ್ನು ದಾಖಲಿಸಿದೆ. ಆದರೆ ಈ ಸಾಹಿತ್ಯ ತನ್ನ ಅಭಿವ್ಯಕ್ತಿಗಳನ್ನು ಪ್ರಕಟಿಸುವಾಗ, ಗುರುತಿಸುವಾಗ, ಕಂಡುಕೊಳ್ಳುವಾಗ, ಗ್ರಹಿಸುವಾಗ ಅಂಗವಿಕಲತೆ ಉಳ್ಳ ಸಮುದಾಯದ ಒಳಗೊಳ್ಳುವಿಕೆ ಹೇಗೆ ಪ್ರಚುರವಾಗಿದೆ? ಏಕೆಂದರೆ ಕನ್ನಡ ಸಾಹಿತ್ಯ ತನ್ನ ಅಭಿವ್ಯಕ್ತಿಗಳನ್ನು ದಾಖಲಿಸುವಾಗ ಅಂಗವಿಕಲತೆ ಉಳ್ಳ ಸಮುದಾಯದ ಧ್ವನಿಗಳನ್ನು ಅಡಕವಾಗಿಸಿದೆಯೇ? ಕಾಣಿಸಿದೆಯೇ? ಗುರುತಿಸಿದೆಯೇ? ಹೀಗೆ ಹಲವಾರು ಪ್ರಶ್ನೆಗಳು ಮುಖ್ಯವಾಗಿ ಚರ್ಚೆಗೆ ಒಳಗಾಗಬೇಕಿದೆ.

ಈ ಮೇಲೆ ಎತ್ತಿದ ಪ್ರಶ್ನೆಗಳ ಹಿನ್ನೆಲೆಯಲ್ಲಿ ಅನುಭೂತಿ ಎಂದರೇನು? ಎಂಬ ವಿಚಾರ ಸ್ಪಷ್ಟಪಡಿಸಿಕೊಂಡು ವಿಷಯವನ್ನು ಅನಾವರಣಗೊಳಿಸುವುದು ಸಮಂಜಸ ಎಂದು ತೋರುವುದು.

ಅನುಭೂತಿ ಎಂದರೆ ಒಂದು ಸಮುದಾಯದ ಬಗ್ಗೆ ಸಮಾಜ ಇಲ್ಲವೆ ಸಾಹಿತ್ಯಿಕ ವಲಯ ತಾಳಿರುವ ನಿಲುವು, ಕಂಡಿರುವ ವಿಷಯ, ವಸ್ತು ಗ್ರಹಿಸಿರುವ ತಿಳುವು, ಕಾಣಿಸಿರುವ ಪರಿಯ ವಸ್ತು ಸ್ಥಿತಿ. ವೇಗವಾಗಿ ಓಡುತ್ತಿರುವ ನಾಗರಿಕತೆ, ಹೊಸ ಹೊಸ ಆವಿಷ್ಕಾರಗಳ ಬೆಂಬಲದಿಂದ ಅಂಗವಿಕಲತೆ ಉಳ್ಳ ಸಮುದಾಯ ಸುಶಿಕ್ಷಿತ ಸಮುದಾಯವಾಗಿದೆ. ಪ್ರಸ್ತುತ ಕಾಲಘಟ್ಟದ ಸಂದರ್ಭದಲ್ಲಿ ಈ ಸಮುದಾಯವೂ ಕೂಡ ತನ್ನ ಸೃಜನಾತ್ಮಕ ನೆಲೆ ಕಂಡುಕೊಳ್ಳುತ್ತಿದೆ. ಹೀಗಾಗಿ ಕನ್ನಡ ಸಾಹಿತ್ಯ ಅಂಗವಿಕಲತೆ ಉಳ್ಳ ಸಮುದಾಯದ ಬಗ್ಗೆ ಯಾವ ರೀತಿಯ ಅನುಭೂತಿ ಪ್ರಕಟಪಡಿಸಿದೆ ಎಂದು ಪರಿಶೋಧಿಸುವುದು ನಮ್ಮ ಲೇಖನದ ಉದ್ದೇಶವಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ರಾಜಾಸ್ಥಾನ ಪರವಾದ ಪಂಡಿತರನ್ನು ಮೆಚ್ಚಿಸುವ ಕೃತಿಗಳು ಬಂದಿರುವುದು ಗೊತ್ತಾಗುತ್ತದೆ. ನಂತರ ಜನಪರವಾದ ಸಾಹಿತ್ಯ ಎಂದು ಗುರುತಿಸಿಕೊಂಡ ವಚನ ಸಾಹಿತ್ಯದಲ್ಲಿ ಬಸವಣ್ಣನವರ ಒಂದು ವಚನ "ಅತ್ತಲಿತ್ತ ನೋಡದಂತೆ ಅಂಧಕನ ಮಾಡಯ್ಯ ತಂದೆ, ಅತ್ತಲಿತ್ತ ಸುಳಿಯದಂತೆ ಎಳವನ ಮಾಡಯ್ಯ ತಂದೆ, ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ" ಗಮನ ಸೆಳೆಯುತ್ತದೆ. ತ್ರಿಪದಿ, ಕೀರ್ತನೆ ಸಾಹಿತ್ಯ ಧಾರ್ಮಿಕ ಸಾಮಾಜಿಕ ದೋಷಗಳ ಬಗ್ಗೆ ಬೆಳಕು ಚೆಲ್ಲಿದೆ, ಆದರೂ ಕೂಡ ಈ ಸಾಹಿತ್ಯವನ್ನು ಪರಿಶೀಲಿಸುವ ಅಗತ್ಯವಿದೆ ಎಂದು ತೋರುತ್ತದೆ.

ಪಾಶ್ಚಾತ್ಯ ಶಿಕ್ಷಣ, ರಾಷ್ಟ್ರೀಯ ಮನೋಧರ್ಮ ಇವುಗಳ ಪ್ರೇರಣೆಯಿಂದ ಉತ್ಸಾಹದಿಂದಲೇ ರಚನೆಯಾದ ಆಧುನಿಕ ಕನ್ನಡ ಸಾಹಿತ್ಯ ಮಾನವೀಯವಾದ, ಮತಾತೀತ, ಜೀವಪರವಾದ ಆಶಯಗಳನ್ನು ತನ್ನ ಸೃಜನಾತ್ಮಕ ನೆಲೆಯಲ್ಲಿ ಅಭಿವ್ಯಕ್ತಿಸಿದ ಸಾಹಿತ್ಯ. ಅಂಗವಿಕಲತೆ ಉಳ್ಳ ಸಮುದಾಯದ ಆಶಯಗಳನ್ನು, ಧ್ವನಿಗಳನ್ನು ದಾಖಲಿಸಿದೆಯೇ? ಎಂದು ಚಿಂತಿಸುವ, ವಿಶ್ಲೇಷಣೆಗೆ ಮತ್ತು ಚರ್ಚೆಗೆ ಒಳಪಡಿಸುವ ಗಮನೀಯ ವಿಷಯವಾಗಿದೆ.

ಆಧುನಿಕ ಕನ್ನಡ ಸಾಹಿತ್ಯ ಹಲವಾರು ಸಾಹಿತ್ಯಿಕ ಚಳುವಳಿಗಳನ್ನು ಕಂಡಿದೆ. ಈ ಚಳುವಳಿಗಳು ಎಲ್ಲ ಸಮುದಾಯಗಳ ನೋವು, ಸಂಕಟ, ಅಸಹಾಯಕತೆ, ಅವಮಾನಗಳ ಬಗ್ಗೆ ಮಾತನಾಡಿವೆ. ಕೆಲವು ಕೃತಿಗಳಲ್ಲಿ ಅಂಗವಿಕಲತೆ ಉಳ್ಳ ಸಮುದಾಯದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದರೂ ಕೂಡ ಆ ಸಮುದಾಯ ಅನುಭವಿಸುವ ನೋವು, ಸಂಕಟ, ಅವಮಾನಗಳ ಬಗ್ಗೆ ಅಭಿವ್ಯಕ್ತಿಸುವಲ್ಲಿ ಕನ್ನಡ ಸಾಹಿತ್ಯ ಸೋತಿದೆ ಎಂದು ಅನಿಸುತ್ತದೆ. ಆಧುನಿಕ ಸಂದರ್ಭದ ನವೋದಯ ಸಾಹಿತ್ಯ ಮನುಷ್ಯ ತಾನು ದಾಸ್ಯ ಭಾವ ಹಾಗೂ

ಕೀಳರಿಮೆಯಿಂದ ಹೊರಬಂದು ಬದುಕನ್ನು ಸ್ವೀಕರಿಸುವ ಹಂಬಲದ ಅಭಿವ್ಯಕ್ತಿಯಾದರೆ, ಪ್ರಗತಿಶೀಲ ಸಾಹಿತ್ಯ ಶೋಷಿತ ಸಮುದಾಯಗಳ ಸಮಸ್ಯೆಗಳ ವಸ್ತು ಸ್ಥಿತಿ, ಅವುಗಳಿಂದ ಉಂಟಾಗಬಹುದಾದ ಆಕ್ರೋಶದ ನಿರೂಪಣೆ ವ್ಯಕ್ತವಾಗಿದೆ.

ನವ್ಯ ಸಾಹಿತ್ಯ ನಗರಗಳ ಬೆಳವಣಿಗೆಯಿಂದ ಮನುಷ್ಯನಿಗೆ ಎದುರಾದ ಸಮಸ್ಯೆಗಳ ಬಗ್ಗೆ ಮಾತನಾಡಿದರೆ, ದಲಿತ ಬಂಡಾಯ ಸಾಹಿತ್ಯ ಶತ ಶತಮಾನಗಳಿಂದ ದಮನಕ್ಕೆ, ತುಳಿತಕ್ಕೆ, ಶೋಷಣೆಗೆ ಒಳಗಾದ ಸಮುದಾಯಗಳ ಅನುಭವ, ಸಂಕಟ, ಅಸಹಾಯಕತೆ, ಹಸಿವು ಇವುಗಳ ಬಗ್ಗೆ ತೀವ್ರತರವಾದ ಅನುಭೂತಿಯನ್ನು ಪ್ರಕಟಪಡಿಸಿದೆ. ಬಾಯಿ ಇಲ್ಲದವರ ಧ್ವನಿಯಾಗಬೇಕಾಗಿದ್ದ ಸಾಹಿತ್ಯ ಮೂಕಿಯಂತಹವರ ದುರಂತಕ್ಕೆ ಕಾರಣವಾಗಿದೆ. “ನೀನು ಮೂಕಿ ಅಂತ ಯಾರಿಗೂ ತೋರಿಸಬಾರದು” ಎಂಬ ಮಾತು ಸಮಾಜ ಅಂಗವಿಕಲತೆ ಉಳ್ಳ ಸಮುದಾಯದ ಬಗ್ಗೆ ತಾಳಿರುವ ಮನೋಭಾವವೇನು? ಎಂಬುವುದನ್ನು "ಕೊನೆ ಗಿರಾಕಿ ಕಥೆ" ಮನಗಾಣಿಸುತ್ತದೆ. ಅಂದಿನ ಸಮಾಜ ಅಂಗವಿಕಲರೆಂದರೆ ಶಾಪಗ್ರಸ್ತರು, ಇಲ್ಲವೆ ದೇವರ ಮಕ್ಕಳು ಅಥವಾ ಪೂರ್ವ ಜನ್ಮದ ಪಾಪಕರ್ಮಗಳ ಫಲವಾಗಿ ಜನಿಸಿದವರು ಎಂಬ ಪೂರ್ವಾಗ್ರಹ ಪೀಡಿತ ನಂಬಿಕೆಗಳ ಅಭಿವ್ಯಕ್ತಿಯಾಗಿದೆ. ಕೊನೆ ಗಿರಾಕಿ ಕಥೆ ಮುಖ್ಯವಾಗಿ ಹಸಿವು, ಅಸಹಾಯಕತೆ, ವೇಶ್ಯಾ ಸಮಸ್ಯೆಗಳ ಕುರಿತು ಗಮನ ಹರಿಸುತ್ತದೆಯೇ ವಿನಃ ಆಕೆಗಿರುವ ವಿಕಲತೆಯ ಬಗ್ಗೆ ಅಷ್ಟಾಗಿ ಮಾತನಾಡುವುದಿಲ್ಲ.

ಎಂ. ಕೆ. ಇಂದಿರಾ ಅವರು ತಮ್ಮ "ತುಂಗಭದ್ರಾ" ಕಾದಂಬರಿಯಲ್ಲಿ ದೈಹಿಕ ಅಂಗವಿಕಲೆ ಒಬ್ಬಳು ಅನುಭವಿಸುವ ಸಮಸ್ಯೆಗಳ ಬದುಕಿನ ಚಿತ್ರಣ ನೀಡಿದ್ದಾರೆ. ತ್ರಿವೇಣಿಯವರು ತಮ್ಮ ಕೃತಿಗಳಲ್ಲಿ ಮನೋರೋಗಿಗಳನ್ನು ಸಮಾಜ ಚಿಕಿತ್ಸಕ ದೃಷ್ಟಿಯಿಂದ ನೋಡಬೇಕೆಂದಿರುವುದು ಗಮನಿಸಬೇಕಾದ ಮಹತ್ವಪೂರ್ಣ ವಿಚಾರವಾಗಿದೆ. ಶರಪಂಜರ, ಮುಚ್ಚಿದ ಬಾಗಿಲು, ಬೆಕ್ಕಿನ ಕಣ್ಣು, ದೂರದ ಬೆಟ್ಟ ಮನೋರೋಗಿಗಳನ್ನು ಕುರಿತಾದ ವಸ್ತು ಹೊಂದಿರುವ ಕೃತಿಗಳಾಗಿವೆ.

ಚಂದ್ರಶೇಖರ ಪಾಟೀಲ ಅವರು ತಮ್ಮ ಅಸಂಗತ ನಾಟಕ "ಕುಂಟಾ ಕುಂಟಾ ಕುರವತ್ತಿ"ಯಲ್ಲಿ ಕೂಡ ಮನುಷ್ಯನ ಸಹಜತೆಗಿಂತ ಕುಂಟ, ಕುರುಡ, ಕಿವುಡ ಪಾತ್ರಗಳ ಮೂಲಕ ಅಸಹಜತೆಗಳ ಬಗ್ಗೆ ಇರಬಹುದಾದ ಸಾಧ್ಯತೆಗಳನ್ನು ಗುರುತಿಸಿದರೂ ಕೂಡ ಆ ಪಾತ್ರಗಳ ಅಸ್ತಿತ್ವದ ಕುರಿತು ಮೌನ ವಹಿಸಿರುವುದು ಕಂಡುಬರುತ್ತದೆ.

ಎಸ್.ಎಲ್.ಭೈರಪ್ಪನವರ ‘ಸಾರ್ಥ’ ಕಾದಂಬರಿಯಲ್ಲಿ ಬರುವ ಚಂದ್ರ ಎಂಬುವವಳು ಹೀಗೆ ಹೇಳುತ್ತಾಳೆ; ತನ್ನ ಕುರುಡ ಪತಿ ಆಕೆಯನ್ನು ಸ್ಪರ್ಶಿಸಿ ಅವಳ ಸೌಂದರ್ಯದ ಕುರಿತು ಹೇಳಿದಾಗ ನನಗೆ ಹಿಂಸೆಯಾಗುತ್ತಿತ್ತು ಎಂದು ಹೇಳುವ ಇವಳು, ಆತನ ಅಳಿಯನ ನೋಟದ ಸೌಂದರ್ಯದ ಆಸ್ವಾದನೆಗೆ ಬೆತ್ತಲೆಯಾಗುತ್ತಾಳೆ.

ಇಂತಹ ನಿರೂಪಣೆಗಳು ಈ ಸಮುದಾಯದ ನೋವು ನಲಿವುಗಳನ್ನು, ಅವರ ಅಸ್ತಿತ್ವವನ್ನು ಹೇಗೆ ಗ್ರಹಿಸಬಲ್ಲವು ಎಂಬ ಪ್ರಶ್ನೆ ಮುಖ್ಯವಾಗಿ ನಿಲ್ಲುತ್ತದೆ. ಹಾಗೆಯೇ ಕನ್ನಡದ ಸಾಹಿತ್ಯಿಕ ಚಳುವಳಿಗಳು ಸಮಾಜದಲ್ಲಿ ನಡೆಯುವ ಶೋಷಣೆ, ದುರಂತ, ಹಲವಾರು ಸಮಸ್ಯೆಗಳಿಗೆ ಸ್ಪಂದನೆ ಮತ್ತು ಪ್ರತಿಭಟನೆ ತೋರಿವೆ. ಆದರೆ ಅಂಗವಿಕಲತೆ ಉಳ್ಳ ಸಮುದಾಯಕ್ಕೆ ನಡೆದ ಶೋಷಣೆ, ದಬ್ಬಾಳಿಕೆ, ಅವಮಾನಗಳ ಬಗ್ಗೆ ಧ್ವನಿಯನ್ನೇ ಎತ್ತದಿರುವುದನ್ನು ಕಾಣಬಹುದು.

ಪುಟ್ಟರಾಜ ಗವಾಯಿಗಳು ಕೃತಿಗಳನ್ನು ಬರೆದಿದ್ದರೂ ಅವುಗಳನ್ನು ಸಾಹಿತ್ಯಿಕ ವಲಯ

ಹೇಗೆ ಗ್ರಹಿಸಿದೆ ಮತ್ತು ಆಲೋಚನೆ ಮಾಡಿದೆ ಎಂಬುವುದನ್ನು ವಿಚಾರಕ್ಕೆ ಒಳಪಡಿಸಬೇಕಾಗಿದೆ. ಇದನ್ನೆಲ್ಲ ಗಮನಿಸಿದಾಗ ಕನ್ನಡ ಸಾಹಿತ್ಯ ದೃಷ್ಟಿಯಿಂದ ನೀರಸ ಎಂದು ತೋರಿದರೂ ಇಪ್ಪತ್ತೊಂದನೆ ಶತಮಾನದ ಆದಿ ಭಾಗದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಬ್ರೈಲ್‌ನಲ್ಲಿ ಸಾಹಿತ್ಯ ಕೃತಿಗಳನ್ನು ಪ್ರಕಟಿಸುವ ಮೂಲಕ, ಕನ್ನಡ ಸಾಹಿತ್ಯ ಪರಿಷತ್ತು ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಲು ಮತ್ತು ಆ ಸಮುದಾಯಗಳು ಸಾಹಿತ್ಯ ಸಮ್ಮೇಳನಗಳನ್ನು ನಡೆಸಲು ಅವಕಾಶ ನೀಡಿ ಹೊಸ ಭರವಸೆ ಮೂಡಿಸಿವೆ. ಇದು ಅವರ ಸಂವೇದನೆಗಳನ್ನು ಪ್ರಕಟಪಡಿಸಲು ಸುಸಂದರ್ಭ ಮತ್ತು ಆಶಾದಾಯಕ ಬೆಳವಣಿಗೆಯಾಗಿದೆ.